ಬೆಳೆದಂತಹ ಬೆಲೆಗಳಿಗೆ ನ್ಯಾಯವಾದ ಬೆಲೆ ಕೊಡುವುದಕ್ಕೆ ಅವರಿಂದ ಸಾಧ್ಯವಿಲ್ಲ. ಲಾಭದಾಯಕವಾದ ಬೆಳೆ ಇರಲಿ, ಯಾವುದೇ ಇರಲಿ, ಈ ಹಿನ್ನೆಲೆಯಲ್ಲಿ ರೈತರಿಗೆ ಸಹಾಯ ಮಾಡಬೇಕಾದುದು ಅವಶ್ಯಕ. ಇವತ್ತು ಏನು ಪರಿಹಾರ ಕೊಟ್ಟಿದ್ದಾರೆ, ಇದು ಕೇವಲ ಸಮುದ್ರಕ್ಕೆ ಒಂದು ಹನಿ ನೀರು ಇದ್ದ ಹಾಗೆ. ಆದುದರಿಂದ ಈ ನೀತಿಯನ್ನು ವಿರೋಧ ಮಾಡಬೇಕಾಗಿದೆ ಎಂದು ಹೇಳುತ್ತೇನೆ. ಇದನ್ನು ಎಲ್ಲರೂ ಸಾಮೂಹಿಕವಾಗಿ ವಿರೋಧ ಮಾಡಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ನಾನು ಬಹಳ ನೊಂದ ಮನಸ್ಸಿನಿಂದ ಈ ಸರ್ಕಾರ ರೈತ ವಿರೋಧಿ ಸರ್ಕಾರ ಇದೆ ಎಂದು ಹೇಳಬೇಕಾಗಿದೆ. ಇದರಿಂದ ನನಗೆ ಸಮಾಧಾನ ಇಲ್ಲ. ಆದಕಾರಣ ನಾವೆಲ್ಲರೂ ಕೂಡ ಧರಣಿ ಮಾಡಬೇಕಾಗಿದೆ.

(ವಿರೋಧ ಪಕ್ಷದ ಮಾನ್ಯ ಸದಸ್ಯರು ಧರಣಿ ಮಾಡಿದರು.)

ಶ್ರೀ ಜೆ. ಸಿ. ಮಾಧುಸ್ವಾಮಿ : ಇಂಥ ಸರ್ಕಾರಗಳನ್ನು ನಾವು ಇದುವರೆಗೆ ನೋಡಿರಲಿಲ್ಲ. ಮಾನ, ಮರ್ಯಾದೆ, ಲಜ್ಜೆ ಏನೂ ಇಲ್ಲದ ಸರ್ಕಾರ ಇದು .....
(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್ : ಇದು ರೈತ ವಿರೋಧಿ ಸರ್ಕಾರ, ಇದು ರೈತರನ್ನು ವಂಚಿಸುವ ಸರ್ಕಾರ .....
(ಗೊಂದಲ)

ಅಧ್ಯಕ್ಷರು : ಅದು ಯಾವುದೂ ರೆಕಾರ್ಡಿಗೆ ಹೋಗತಕ್ಕದ್ದಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಸಣ್ಣ ರೈತರಿಗೆ ರಿಯಾಯಿತಿ ಕೊಡುತ್ತೇವೆಂದು ಏನು ಹೇಳಿದ್ದಾರೆ, ಅದನ್ನು ಎಲ್ಲಾ ರೈತರಿಗೆ ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನೋಡಿ, ಎಲ್ಲಾ ರೈತರಿಗೆ ಕೊಟ್ಟಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ : ನಾನು ನೋಡಿದ್ದೇನೆ.
(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ರೈತರು ಸಾಲ ಪಡೆಯಲು ಮಾರ್ವಾಡಿ ಮನೆಗೆ ಹೋಗಬೇಕು. ಆ ತಂತ್ರ ನಿಮ್ಮದು.
(ಗೊಂದಲ)

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ರೈತನನ್ನು ಉದ್ಧಾರ ಮಾಡುವುದಕ್ಕೆ ಬಹಳ ಉತ್ಸಾಹ ಎಲ್ಲಾ ಕಡೆಯಿಂದ ಕಂಡುಬರುತ್ತಿದೆ. ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳೂ ಇರಲಿಲ್ಲ, ಕೃಷಿ ಮಂತ್ರಿಗಳೂ ಇರಲಿಲ್ಲ. ಆಗ ಬೈರೇಗೌಡರು